ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
"ಸಾರಿಗೆ ಭವನ" ಕೇಂದ್ರ ಕಛೇರಿ,
ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560 027. ಭಾರತ
ದೂರವಾಣಿ : 080-22221321 / 22221325
ವೆಬ್-ಸೈಟ್ : www.ksrtc.in

Karnataka State Road Transport Corporation
"Transport House" Central Offices,
K.H.Road, Shanthinagar, Bangalore-560 027. India
Tel : 080-22221321 / 25
Website : www.ksrtc.in

ಕರಾಸಾ:ಕೇಕ:ಕಾರ್ಮಿಕ: 354 :2020-21

ದಿ.19.01.2021
27

## ಟಿಪ್ಪಣಿ

ವಿಷಯ:-ನೌಕರರ ಸೇವಾ ಸಂಬಂಧಿತ ಕುಂದುಕೊರತೆ / ಸಮಸ್ಯೆಗಳನ್ನು ಪಡೆದು ನಿಯಮಾನುಸಾರ ಪರಿಶೀಲಿಸಿ ಬಗೆಹರಿಸುವ ಸಂಬಂಧ ಮುಂದುವರಿದ ನಿರ್ದೇಶನಗಳು.

ಉಲ್ಲೇಖ:-ಕರಾಸಾ:ಕೇಕ:ಕಾರ್ಮಿಕ:459:14-15 ದಿನಾಂಕ.28.10.2014 ರನ್ವಯ ಹೊರಡಿಸಲಾದ ಸುತ್ತೋಲೆ ಸಂಖ್ಯೆ:-57/28.10.2014.

*****

ನೌಕರರ ಸೇವಾ ಸಂಬಂಧಿತ ಕುಂದು ಕೊರತೆ/ಸಮಸ್ಯೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಸಕಾಲದಲ್ಲಿ ಬಗೆಹರಿಸುವುದು ಮತ್ತು ತತ್ಸಂಬಂಧ ಸೂಕ್ತ ದಾಖಲಾತಿಗಳನ್ನು ಇಟ್ಟುಕೊಳ್ಳುವುದು, ಈ ಪದ್ಧತಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಸಲುವಾಗಿ ನಿರ್ದೇಶನಗಳನ್ನು ಉಲ್ಲೇಖಿತ ಸುತ್ತೋಲೆಯನ್ವಯ ನೀಡಲಾಗಿದೆ.

ಆದಾಗ್ಯೂ, ಘಟಕ ಮತ್ತು ವಿಭಾಗ ಮಟ್ಟದಲ್ಲಿ ನೌಕರರ ಸೇವಾ ಸಂಬಂಧಿತ ಕುಂದುಕೊರತೆ/ದೂರುಗಳಿಗೆ ಸೂಕ್ತ ರೀತಿಯಲ್ಲಿ ಸ್ಪಂದಿಸದಿರುವ/ನಿಯಮಾನುಸಾರ ಪರಿಶೀಲಿಸಿ ಬಗೆಹರಿಸದಿರುವ ಬಗ್ಗೆ ನೌಕರರಲ್ಲಿ ಅಸಮಾಧಾನವಿರುತ್ತದೆ. ಈ ವ್ಯವಸ್ಥೆಯನ್ನು ಮತ್ತಷ್ಟು ಕಟ್ಟುನಿಟ್ಟಾಗಿ ಜಾರಿಗೊಳಿಸುವ ನಿಟ್ಟಿನಲ್ಲಿ ಉಲ್ಲೇಖಿತ ಸುತ್ತೋಲೆಯಲ್ಲಿ ನೀಡಿರುವ ನಿರ್ದೇಶನಗಳನ್ನು ಹೊರತುಪಡಿಸಿ, ಕೆಳಕಂಡ ಮುಂದುವರಿದ ನಿರ್ದೇಶನಗಳನ್ನು ನೀಡಲಾಗಿದೆ.

ಅದರಂತೆ, ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿಯವರು ವಿಭಾಗೀಯ ಸಂಚಾರ ಅಧಿಕಾರಿ ಮತ್ತು ವಿಭಾಗೀಯ ತಾಂತ್ರಿಕ ಶಿಲ್ಪಿ ರವರೊಂದಿಗೆ ಮಾಸಿಕ ಕನಿಷ್ಠ ಒಂದು ಘಟಕಕ್ಕೆ ಭೇಟಿ ನೀಡಿ, ಕನಿಷ್ಠ ಅರ್ಧ ದಿವಸ ಅಂದರೆ, ಬೆಳಿಗ್ಗೆ 7.00 ಗಂಟೆಯಿಂದ ಮಧ್ಯಾಹ್ನ 2.00 ಗಂಟೆಯವರೆಗೆ ಅಥವಾ ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 7.00 ಗಂಟೆಯವರೆಗೆ ಘಟಕದಲ್ಲಿ ವಾಸ್ತವ್ಯವಿದ್ದು, ಘಟಕದ ಬಸ್ಸುಗಳ ದುರಸ್ಥಿ, ನಿರ್ವಹಣೆ ಮತ್ತು ಅನುಸೂಚಿಗಳ ಆಚರಣೆ ಸಂಬಂಧಪಟ್ಟ ಕುಂದುಕೊರತೆ/ಸಮಸ್ಯೆಗಳನ್ನು ಆಲಿಸಿ, ನಿಯಮಾನುಸಾರ ಪರಿಶೀಲಿಸಿ ಬಗೆಹರಿಸುವುದು.

ಜೊತೆಗೆ, ನೌಕರರ ಸೇವಾ ಸೌಲಭ್ಯಗಳಿಗೆ ಸಂಬಂಧಪಟ್ಟ ಕುಂದುಕೊರತೆ/ಸಮಸ್ಯೆಗಳು ಇದ್ದಲ್ಲಿ, ಅವುಗಳನ್ನು ಸಹ ಪಡೆದು ನಿಯಮಾನುಸಾರ ಪರಿಶೀಲಿಸಿ ಬಗೆಹರಿಸುವುದು ಮತ್ತು ತತ್ಸಂಬಂಧ ವಿಭಾಗ ಮಟ್ಟದಲ್ಲಿ ದಾಖಲಾತಿಗಳನ್ನು ಇಟ್ಟುಕೊಳ್ಳುವುದು.

ಅಲ್ಲದೇ, ಉಲ್ಲೇಖಿತ ಸುತ್ತೋಲೆಯಲ್ಲಿ ವಿಭಾಗದ ಕಾರ್ಮಿಕ ಮತ್ತು ಕಲ್ಯಾಣಾಧಿಕಾರಿ, ಸ/ಆಡಳಿತಾಧಿಕಾರಿ ಮತ್ತು ಸ/ಲೆಕ್ಕಾಧಿಕಾರಿಗಳ ತಂಡವು ಘಟಕಗಳಿಗೆ ಭೇಟಿ ನೀಡಲು ತಿಳಿಸಿದ್ದು, ಈ ತಂಡವು ಪ್ರತೀ ತಿಂಗಳು ಕನಿಷ್ಠ 02 ಘಟಕಗಳಿಗೆ ಕಡ್ಡಾಯವಾಗಿ ಭೇಟಿ ನೀಡುವುದು ಮತ್ತು ನೌಕರರ ಕುಂದುಕೊರತೆ/ದೂರುಗಳನ್ನು ನಿಯಮಾನುಸಾರ ಪರಿಶೀಲಿಸಿ, ಬಗೆಹರಿಸುವುದು. ಒಂದು ವೇಳೆ, ನೌಕರರ ಕುಂದುಕೊರತೆ/ದೂರುಗಳನ್ನು ಬಗೆಹರಿಸಲು ನಿಯಮಾನುಸಾರ ಸಾಧ್ಯವಾಗದ/ಅವಕಾಶ ಇಲ್ಲದ ಪಕ್ಷದಲ್ಲಿ ಆ ಬಗ್ಗೆ ಮುಂದಿನ 07 ದಿನಗಳೊಳಗಾಗಿ ಸಂಬಂಧಿಸಿದ ನೌಕರರಿಗೆ ಹಿಂಬರಹ ನೀಡುವುದು.

ಮೇಲ್ಕಂಡ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸಿರುವ ಬಗ್ಗೆ ಘಟಕವಾರು ಮತ್ತು ವಿಭಾಗದ ಕ್ರೋಢೀಕೃತ ಅನುಸರಣಾ ವರದಿಯನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಗಳಲ್ಲಿ (ನಮೂನೆ-ಅ ಮತ್ತು ನಮೂನೆ-ಆ) ತುಂಬಿ ಮುಂದಿನ ತಿಂಗಳ 10ನೇ ತಾರೀಖಿನೊಳಗಾಗಿ ತಲುಪುವಂತೆ ಈ ಕಚೇರಿಗೆ ಕಳುಹಿಸುವುದು.

ಘಟಕಗಳಲ್ಲಿ ಮೂಲಭೂತ ಸೌಕರ್ಯಗಳು ಅಂದರೆ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ/ಮೂತ್ರಾಲಯಗಳ ಶುಚಿತ್ವ, ನಿರ್ವಹಣೆ ಮತ್ತು ನೌಕರರ ವಿಶ್ರಾಂತಿ ಗೃಹಗಳ ಶುಚಿತ್ವ, ನಿರ್ವಹಣೆಯನ್ನು ಸಮರ್ಪಕವಾಗಿ ಮಾಡುವ ನಿಟ್ಟಿನಲ್ಲಿ ಅವಶ್ಯ ಕ್ರಮವಹಿಸುವುದು, ಖುದ್ದಾಗಿ ಭೇಟಿ ನೀಡಿ ಪರಿಶೀಲಿಸುವುದು.

ವ್ಯವಸ್ಥಾಪಕ ನಿರ್ದೇಶಕರು

ಗೆ,

ಎಲ್ಲಾ ಹಿರಿಯ/ವಿಭಾಗ ನಿಯಂತ್ರಣಾಧಿಕಾರಿಗಳು,
ಕರಾರಸಾನಿಗಮ.

ಪ್ರತಿಯನ್ನು:
1. ಮಾನ್ಯ ಅಧ್ಯಕ್ಷರು/ಉಪಾಧ್ಯಕ್ಷರು,ಕರಾರಸಾನಿಗಮರವರ ಆಪ್ತಕಾರ್ಯದರ್ಶಿರವರಿಗೆ ಮಾಹಿತಿಗಾಗಿ.
2. ನಿರ್ದೇಶಕರು (ಸಿ ಮತ್ತು ಪ) / ನಿರ್ದೇಶಕರು (ಭ ಮತ್ತು ಜಾ), ಕರಾರಸಾನಿಗಮ ರವರ ಆಪ್ತಕಾರ್ಯದರ್ಶಿರವರಿಗೆ ಮಾಹಿತಿಗಾಗಿ.
3. ಎಲ್ಲಾ ಇಲಾಖಾ ಮುಖ್ಯಸ್ಥರು, ಕರಾರಸಾನಿಗಮ ರವರ ಮಾಹಿತಿಗಾಗಿ ಹಾಗೂ ಮೇಲುಸ್ತುವಾರಿ ವಿಭಾಗಗಳಲ್ಲಿ ಈ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸಿರುವ ಬಗ್ಗೆ ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದು.

## ನಮೂನೆ ಅ

ನೌಕರರ ಸೇವಾ ಸೌಲಭ್ಯಗಳಿಗೆ ಸಂಬಂಧಪಟ್ಟ ಕುಂದುಕೊರತೆ/ಸಮಸ್ಯೆಗಳ ವಿಲೇವಾರಿ ಕುರಿತಂತೆ ಘಟಕವಾರು ವಿವರ

ಘಟಕ:– ವಿಭಾಗ:–

**ಜನವರಿ–2021ರ ಮಾಹೆಯ ವರದಿ**

| ದಿನಾಂಕ:–31.12.2020 ರಂತೆ ಬಗೆಹರಿಯದೇ ಬಾಕಿ ಉಳಿದಿರುವ ಕುಂದುಕೊರತೆಗಳ ಸಂಖ್ಯೆ. | ದಿನಾಂಕ:–01.01.2021 ರಿಂದ ದಿನಾಂಕ:–31.01.2021ರ ಅವಧಿಯಲ್ಲಿ ಸ್ವೀಕರಿಸಿದ ಕುಂದುಕೊರತೆಗಳ ಸಂಖ್ಯೆ. | ದಿನಾಂಕ:–01.01.2021 ರಿಂದ 31.01.2021 ರ ಅವಧಿಯಲ್ಲಿ ಪರಿಶೀಲಿಸಿ, ಬಗೆಹರಿಸಲಾದ ಕುಂದುಕೊರತೆಗಳ ಸಂಖ್ಯೆ. | ನೌಕರರ ಕುಂದುಕೊರತೆ/ದೂರುಗಳನ್ನು ಬಗೆಹರಿಸಲು ನಿಯಮಾನುಸಾರ ಸಾಧ್ಯವಾಗದ/ಅವಕಾಶ ಇಲ್ಲದ ಕಾರಣ ಪ್ರಕರಣಗಳಲ್ಲಿ ವರದಿ ಮಾಹೆಯಲ್ಲಿ ಹಿಂಬರಹ ನೀಡಿರುವ ಪ್ರಕರಣಗಳ ಸಂಖ್ಯೆ. | ದಿನಾಂಕ:–31.01.2021 ರಂತೆ ಬಗೆಹರಿಯದೆ ಬಾಕಿ ಉಳಿದಿರುವ ಕುಂದುಕೊರತೆಗಳ ಸಂಖ್ಯೆ. |
|---|---|---|---|---|
| | | | | |

## ನಮೂನೆ ಆ

ನೌಕರರ ಸೇವಾ ಸೌಲಭ್ಯಗಳಿಗೆ ಸಂಬಂಧಪಟ್ಟ ಕುಂದುಕೊರತೆ/ಸಮಸ್ಯೆಗಳ ವಿಲೇವಾರಿ ಕುರಿತಂತೆ ವಿಭಾಗದ ಕ್ರೋಢೀಕೃತ ವಿವರ

**ಜನವರಿ–2021ರ ಮಾಹೆಯ ವರದಿ**

| ದಿನಾಂಕ:–31.12.2020 ರಂತೆ ಬಗೆಹರಿಯದೇ ಬಾಕಿ ಉಳಿದಿರುವ ಕುಂದುಕೊರತೆಗಳ ಸಂಖ್ಯೆ. | ದಿನಾಂಕ:–01.01.2021 ರಿಂದ ದಿನಾಂಕ:–31.01.2021ರ ಅವಧಿಯಲ್ಲಿ ಸ್ವೀಕರಿಸಿದ ಕುಂದುಕೊರತೆಗಳ ಸಂಖ್ಯೆ. | ದಿನಾಂಕ:–01.01.2021 ರಿಂದ 31.01.2021 ರ ಅವಧಿಯಲ್ಲಿ ಪರಿಶೀಲಿಸಿ, ಬಗೆಹರಿಸಲಾದ ಕುಂದುಕೊರತೆಗಳ ಸಂಖ್ಯೆ. | ನೌಕರರ ಕುಂದುಕೊರತೆ/ದೂರುಗಳನ್ನು ಬಗೆಹರಿಸಲು ನಿಯಮಾನುಸಾರ ಸಾಧ್ಯವಾಗದ/ಅವಕಾಶ ಇಲ್ಲದ ಕಾರಣ ಪ್ರಕರಣಗಳಲ್ಲಿ ವರದಿ ಮಾಹೆಯಲ್ಲಿ ಹಿಂಬರಹ ನೀಡಿರುವ ಪ್ರಕರಣಗಳ ಸಂಖ್ಯೆ. | ದಿನಾಂಕ:–31.01.2021 ರಂತೆ ಬಗೆಹರಿಯದೆ ಬಾಕಿ ಉಳಿದಿರುವ ಕುಂದುಕೊರತೆಗಳ ಸಂಖ್ಯೆ. |
|---|---|---|---|---|
| | | | | |

ಸೂಚನೆ:–ಮೂಲಭೂತ ಸೌಕರ್ಯ ಅಥವಾ ಇತರೆ ಯಾವುದೇ ಸಾಮಾನ್ಯ ಕುಂದುಕೊರತೆ/ಸಮಸ್ಯೆಗಳ ಮಾಹಿತಿಯನ್ನು ಈ ನಮೂನೆಗಳಲ್ಲಿ ಸೇರಿಸಬಾರದು. ನೌಕರರ ಸೇವಾ ಸೌಲಭ್ಯಗಳಿಗೆ ಸಂಬಂಧಪಟ್ಟ ವ್ಯಕ್ತಿಗತ ಕುಂದುಕೊರತೆ/ಸಮಸ್ಯೆಗಳ ಮಾಹಿತಿಯನ್ನು ಮಾತ್ರ ನೀಡುವುದು.